## ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆಃ 67/2019

ಸಾಕ್ಷಿಯನ್ನು ದಿಃ **08.12.2022** ರಂದು ಕರೆಸಿ ಪ್ರಮಾಣವಚನ ಭೋದಿಸಲಾಯಿತು.

| | | | |
|---|---|---|---|
| ಹೆಸರು | ಶ್ಯಾಮ್ | ಸಿಡಬ್ಲ್ಯೂ3 | ಪಿಡಬ್ಲ್ಯೂ3 |
| ತಂದೆಯ ಹೆಸರು | ರಾಮಚಂದ್ರ | | |
| ವಯಸ್ಸು | 41 ವರ್ಷ | | |
| ಕೆಲಸ | ವ್ಯಾಪಾರ | | |
| ವಾಸಸ್ಥಳ | ಕಲ್ಕುಣಿಕೆ, ಹುಣಸೂರು | | |

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

ಈಗ ನನಗೆ ತೋರಿಸುತ್ತಿರುವ ಸ್ಥಳ ಮಹಜರ್ ನಲ್ಲಿರುವ ಸಹಿ ನನ್ನದೆ ಆಗಿರುತ್ತದೆ. ಅದನ್ನು ದಿಃ 30.05.2018 ರಂದು ಮಾಡಿರುತ್ತೇನೆ. ಸ್ಥಳ ಮಹಜರ್ ನಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ. 2(ಸಿ) ಎಂದು ಗುರತಿಸಲಾಯಿತು. ಸದರಿ ಸಹಿಯನ್ನು ಹಳೆಯ ಪೋಸ್ಟ್ ಆಫೀಸ ರಸ್ತೆಯಲ್ಲಿರುವ ಶಿವ ವೈನ್ ಷಾಪ್ ನಲ್ಲಿ ಮಾಡಿದ್ದೆ. ನಾನು ಆ ದಿನ ಹೋಗಿದ್ದೆ, ಹಿಂದಿನ ದಿನ ಕಳ್ಳತನವಾಗಿದೆ ಎಂದು ಪೊಲೀಸರು ನನಗೆ ಹೇಳಿದ್ದರು. ಪೊಲೀಸರು ಸ್ಥಳದಿಂದ ಸಿ.ಡಿಯನ್ನು ವಶಪಡಿಸಿಕೊಂಡರು ನಾನು ಅದಕ್ಕೆ 5 ರಿಂದ 5.30 ರ ಸಮಯದಲ್ಲಿ ಸಹಿ ಮಾಡಿದ್ದೆ. ನಾನು ಸಹಿ ಮಾಡುವಾಗ ಸ್ಥಳದಲ್ಲಿ ಚಾಸಾ 1 ಮತ್ತು 2 ರವರು ಇದ್ದರು. ಚಾಸಾ 1 ಮತ್ತು 2 ರವರು ನನ್ನ ಸಮಕ್ಷಮ ಸಹಿ ನಿಪಿ. 2 ಕ್ಕೆ ಸಹಿ ಮಾಡಿರುತ್ತಾರೆ. ಈಗ ನನಗೆ ತೋರಿಸುತ್ತಿರುವ ಅಮಾನತ್ತು

ಮಹಜರ್ ನಲ್ಲಿರುವ ಸಹಿ ಕೂಡ ನನ್ನದೆ ಆಗಿದೆ, ಸಾಕ್ಷಿಯ ಸಹಿಯನ್ನು ನಿಪಿ. 3(ಸಿ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಕೂಡ ವೈನ್ ಷಾಪ್ ನಲ್ಲಿ ದಿಃ 30.05.2018 ರಂದು ಮಾಡಿರುತ್ತೇನೆ. ಕಳ್ಳತನ ಆಗಿರುವ ಸಂಬಂಧ ಪೊಲೀಸರು ಅಮಾನತ್ತು ಮಹಜರ್ ಮಾಡಿದಾಗ ಸಹಿಯನ್ನು ಮಾಡಿರುತ್ತೇನೆ. ಅಮಾನತ್ತು ಮಹಜರ್ ಸಮಯದಲ್ಲಿ ಪೊಲೀಸರು ಸಿ.ಡಿಯನ್ನು ವಶಪಡಿಸಿಕೊಂಡಿರುತ್ತಾರೆ. ಅದು ಅಂಗಡಿಯಲ್ಲಿದ್ದ ಸಿಸಿ ಕ್ಯಾಮೆರಾದ ಸಿ.ಡಿಯಾಗಿದೆ. ಅದನ್ನು 4.30 ರಿಂದ 5.30 ರ ಅವಧಿಯಲ್ಲಿ ನಿಪಿ. 3 ರ ಅಮಾನತ್ತು ಮಹಜರ್ ಅನ್ನು ಮಾಡಿರುತ್ತಾರೆ. ಅಮಾನತ್ತು ಮಹಜರ್ ಮಾಡುವಾಗ ಸ್ಥಳದಲ್ಲಿ ಚಾಸಾ 1 ಮತ್ತು 2 ರವರು ಹಾಜರಿದ್ದು, ನನ್ನ ಸಮಕ್ಷಮ ನಿಪಿ.3 ರ ಅಮಾನತ್ತು ಮಹಜರ್ ಗೆ ಸಹಿ ಮಾಡಿರುತ್ತಾರೆ. ಅಮಾನತ್ತು ಮಹಜರ್ ಅಡಿ ವಶಪಡಿಸಿಕೊಂಡಿರುವ ಮು.ಮಾ. 1 ಅನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀಸವಾಲು ಃ 1 ನೇ ಆರೋಪಿ ಪರ ಶ್ರಿ ಎಂ.ಈ.ಎಂ ವಕೀಲರಿಂದ**

ನಾನು ಕೂಡ ಬಾರ್ ಮಾಲೀಕನಾಗಿರುತ್ತೇನೆ ಎಂದರೆ ಸರಿ. ನನ್ನ ಅಂಗಡಿ ಸೇತುವೆ ಬಳಿ ಇರುತ್ತದೆ. ಚಾಸಾ 1 ರವರು ನನ್ನ ಪರಿಚಯಸ್ಥರು ಎಂದರೆ ಸರಿ. ಚಾಸಾ 2 ರವರು ಕೂಡ ನನ್ನ ಪರಿಚಯಸ್ಥರು ಎಂದರೆ ಸರಿ. ಪೊಲೀಸರು ಆ ದಿನ ಮಹಜರ್ ಸಲುವಾಗಿ ನನಗೆ ನೋಟೀಸು ಕೊಟ್ಟಿರಲಿಲ್ಲ. ಯಾವ ದಿನಾಂಕದಂದು ಮಹಜರ್ ಮಾಡಿದ್ದಾರೆ ಎಂದು ನನಗೆ ನೆನಪಿಲ್ಲ ಎಂದರೆ ಸರಿಯಲ್ಲ. ಮಜಹರ್ ನಲ್ಲಿ ಏನೇನು ಬರೆದ್ದಾರೆ ಎಂಬ ವಿಚಾರ ನನಗೆ ನಿಖರವಾಗಿ ಗೊತ್ತಿಲ್ಲ ಎಂದರೆ ಸರಿನಯಲ್ಲ. ಸಹಿ ಮಾಡಿದ ಹೊರತು ಪಡಿಸಿ ಬೇರೆನು ವಿಚಾರ ನನಗೆ ಗೊತ್ತಿಲ್ಲ ಎಂದರೆ ಕಳ್ಳತನ ಆಗಿತ್ತು. ಅಮಾನತ್ತು ಮಹಜರ್ ಆಯಿತು ಎಂದು ಹೇಳಿದ್ದು, ಅದರ ಬಗ್ಗೆ ಕೂಡ ಪೊಲೀಸರು ನನಗೆ ನೋಟೀಸು ಕೊಟ್ಟಿಲ್ಲ ಎಂದರೆ ಸರಿ. ಅದೆ ರೀತಿ ಅಮಾನತ್ತು ಮಹಜರ್

ಸಮಯದಲ್ಲಿ ಪೊಲೀಸನವರು ಯಾರು ಇದ್ದರು ಎಂಬ ವಿಚಾರ ನನಗೆ ಗೊತ್ತಿಲ್ಲ ಎಂದರೆ ಸರಿ. ಆ ದಿನ ನನ್ನ ಸಮಕ್ಷಮ ಯಾವುದೆ ಸಿ.ಡಿಯನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ಆ ದಿನ ಯಾವುದೆ ಅಮಾನತ್ತು ಮಹಜರ್ ಮಾಡಿಲ್ಲ, ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲಃ**

(ತೆರೆದ ನ್ಯಾಯಾಲಯದಸಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನಿಸಾ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.ಹುಣಸೂರು.